MVC No.17/2014
RW-2 ಮುತ್ತುಸ್ವಾಮಿ
Date: 26.03.2026

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ 1 ನೇ ಎದುರುದಾರರ ಪರ ಶ್ರೀ ಆರ್ ಪಿ ಟಿ ವಕೀಲರಿಂದಃ**

**ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.**

ಲಾರಿ ಚಾಲಕನ ಡಿ ಎಲ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್ 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಜಿ ಎಸ್ ಓ ವಕೀಲರಿಂದ**

ನಾನು ಹೇಳಿದ ಲಾರಿ ಅಪಘಾತವಾದ ಸಮಯದಲ್ಲಿ 2 ನೇ ಎದುರುದಾರರ ಕಂಪನಿಯ ವಿಮೆಗೆ ಒಳಪಟ್ಟಿತ್ತು ಎಂದರೆ ಸರಿ. ಆ ಕಾರಣ ನಾನು ಮತ್ತು 2 ನೇ ಎದುರುದಾರರು ಪರಿಹಾರದ ಹಣವನ್ನು ಕೊಡುವ ಬಾಧ್ಯಸ್ತಿಕೆಯನ್ನು ಹೊಂದಿದ್ದೇವೆ ಎಂದರೆ ಸರಿ.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀಮತಿ ಎಸ್ ಎ ಎ ವಕೀಲರಿಂದ**

ಅಪಘಾತ ಮೋಟಾರ್ ಸೈಕಲ್ ಮತ್ತು ಲಾರಿಯ ನಡುವೆ ಸಂಭವಿಸಿದೆ ಎಂದರೆ ಸರಿ. ಪೊಲೀಸರು ಸಲ್ಲಿಸಿದ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಸದರಿ ಮೋಟಾರ್ ಸೈಕಲ್ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಮತ್ತು ಸದರಿ ವಾಹನ ಯಾವುದೇ ವಿಮೆಗೆ ಒಳಪಟ್ಟಿರಲಿಲ್ಲ ಎಂದರೆ ಸರಿ. ಸದರಿ ಅಂಶ ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಸದರಿ ದಿವಸ ಮೋಟಾರ್ ಸೈಕಲ್ ಚಾಲಕ ರಸ್ತೆ ಮಧ್ಯೆಬಂದು ಅಪಘಾತ ಸಂಭವಿಸಿದೆ ಎಂದರೆ ನನಗೆ ಗೊತ್ತಿಲ್ಲ. ಮೋಟಾರ್ ಸೈಕಲ್ ಚಾಲಕನ ಅಪಘಾತ ಸಂಬವಿಸಿರುವ ಕಾರಣ 2 ನೇ ಎದುರುದಾರರು ಯಾವುದೇ ಪರಿಹಾರದ ಹಣವನ್ನು ಕೊಡುವ ಬಾಧ್ಯಸ್ತಿಕೆಯನ್ನು ಹೊಂದಿರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು). ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ